68

ಕರುಣೆ

ಮತ್ತು

ಇತರ ಕಥೆಗಳು

ಅನುವಾದಕ, ಸಂಗ್ರಾಹಕ:

ಶ್ರೀ। ಬಳ್ಕೂರು ಸುಬ್ರಾಯ ಅಡಿಗ,

ಗಂಗೊಳ್ಳಿ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳ

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಅ ಮಗು'
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಷ್ಟು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಸಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳು
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟಿ ಬಿಟ್ಟಿ ಧಿಟ್ಟಿ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯಮ್
೬೪. ಲೌಕಿಕ ನ್ಯಾಯಗಳು
೬೫. ಶಿಶುಪಾಲ ಮಾನಭಂಗ
೬೬. ಜರಾಸಂಧ ವಧೆ
೬೭. ಜವಾಹರಲಾಲರ ಜೀವನ ಚರಿತ್ರೆ
೬೮. ಕರುಣೆ ಮತ್ತು ಇತರ ಕಥೆಗಳು

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಅರ್ವತ್ತೆಂಟು ಪುಸ್ತಕಗಳಲ್ಲಿ, ಅರ್ವತ್ತೆಂಟು ಆಣೆಗಳಿಗೆ, 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1476 ಪುಟಗಳನ್ನು ಕೊಟ್ಟಿರುತ್ತದೆ.

ಕರುಣೆ

ಮತ್ತು ಇತರ ಕಥೆಗಳು

---

೧. ಕರುಣೆ

ದಟ್ಟವಾದ ಕಾರ್ಮೋಡಗಳಿಂದ ತುಂಬಿದ ಕತ್ತಲೆಯ ರಾತ್ರಿ. ಭಿಕ್ಷು ಉಪಗುಪ್ತನು ವಿಶ್ರಾಮದ ಅಗಾಧ ನಿದ್ರೆಯಲ್ಲಿ ಲೀನನಾಗಿದ್ದನು. ನಟ್ಟಿರುಳು ಸಮೀಪಿಸಿದಾಗ ಉತ್ತರ ದಿಕ್ಕಿನಿಂದ ನೂಪುರಗಳ ಇನಿದನಿಯು ಕೇಳಿಬಂತು. ಮದಮತ್ತ ಪಾದಗಳ ಈ ವಾದನವು ಮೆಲ್ಲಮೆಲ್ಲನೆ ಸಮೀಪಿಸುತ್ತಿತ್ತು. ಫಕ್ಕನೆ ಕಾಲೆಡವಿದಂತಾಗಿ ಶಬ್ದ ನಿಂತುಬಿಟ್ಟಿತು. ಭಿಕ್ಷು ಉಪಗುಪ್ತನು ಬೆಚ್ಚಿ ನೋಡಿದನು!—ತನ್ನ ನೀಲ ಸೆರಗಿನಲ್ಲಿ ದೀಪವನ್ನು ಮರೆಯಾಗಿರಿಸಿ ನಗರದ ಪ್ರಖ್ಯಾತ ನರ್ತಕಿ ವಾಸವದತ್ತೆಯು ಎದುರು ನಿಂತಿದ್ದಾಳೆ. ಆಗಲೇ ಸ್ವರ್ಣಮೃಣಾಲದಂದಹ ಕರಗಳಿಂದ ಅವಗುಂಠನವು ಸರಿಸಲ್ಪಟ್ಟು ಎರಡು ಪುಷ್ಪಿತ ಅಧರಗಳು ಮಾತಾಡಿದವು:—'ಭಿಕ್ಷು, ನನ್ನನ್ನು ಕ್ಷಮಿಸಿಬಿಡು. ನನ್ನ ಪಾದಾಘಾತದಿಂದ ನಿನಗೆ ಪೆಟ್ಟಾಯಿತೆ?"

ಇಷ್ಟಾದರೂ ವಾಸವದತ್ತೆ ನಿಂತೇ ಇದ್ದಳು. ಗೌರವರ್ಣದ ಮೇಲೆ ಚಂದ್ರನಂತುದಿಸಿದ ಮುಖಮಂಡಲದಲ್ಲಿ ಯೌವನದ ಪೂರ್ಣ ವಿಕಾಸವನ್ನು ಕಂಡು ಅವಳು ತನ್ನನ್ನೇ ಮರೆತುಬಿಟ್ಟಳು. ಅವಳು ಭಿಕ್ಷುವಿನ ಕೈಯನ್ನು ತನ್ನೆಡೆಗೆಳೆಯುತ್ತ—"ರೂಪಕುಮಾರ! ನನ್ನ ಭವನಕ್ಕೆ ನಡೆ; ಈ ಸೌಂದರ್ಯಕ್ಕಾಗಿ ಭಗವಂತನು ಕಠೋರ ಭೂತಳವನ್ನಲ್ಲ— ಸುಖಶಯ್ಯೆಯನ್ನು ನಿರ್ಮಿಸಿದ್ದಾನೆ" ಎಂದು ವಿನಂತಿಸಿದಳು.

"ಸುಮುಖಿ, ಈಗ ನೀನು ಹೊರಟುಹೋಗು; ನಾನು ಸಮಯವನ್ನು ಪ್ರತೀಕ್ಷಿಸುತ್ತಿದ್ದೇನೆ. ಆಗ ನಾನು ಸ್ವತಃ ನಿನ್ನೆಡೆಗೆ ಬರುವೆ"........ ಭಿಕ್ಷು ಮೆಲ್ಲನೆ ಕೈಯೆಳೆದುಕೊಳ್ಳುತ್ತ ಉತ್ತರವಿತ್ತನು.

ಒಂದು ವರ್ಷದ ಬಳಿಕ ಬೆಳ್ದಿಂಗಳಿಂದ ಪ್ರಕಾಶಮಾನವಾದ ನಿರ್ಜನ ಪಥದಲ್ಲಿ ಭಿಕ್ಷುವೊಬ್ಬನು ವೇಗವಾಗಿ ಸಾಗುತ್ತಿದ್ದನು. ಅಮ್ರವನವನ್ನು

ದಾಟಿದ ಬಳಿಕ ಒಂದು ವಿಶಾಲ ಅಶ್ವತ್ಥವೃಕ್ಷದ ಕೆಳಗೆ ಹೋಗಿ ನಿಂತು ಕೊಂಡನು. ಎದುರಿಗೆ ಹೆಂಗಸೊಬ್ಬಳು ಸಿಡುಬಿನ ಬೊಕ್ಕೆಗಳಿಂದ ತುಂಬಿ ಸ್ಮೃತಿಗೆಟ್ಟು ಬಿದ್ದಿದ್ದಳು. ಭಿಕ್ಷು ಅವಳನ್ನೆತ್ತಿ ತನ್ನ ಮಡಿಲ ಮೇಲಿಟ್ಟು ಕೊಂಡು ಮುಖದ ಮೇಲೆ ತಣ್ಣೀರೆರಚಿದನು. ಹೆಂಗಸು ಕಣ್ದೆರೆದು ನರಳುದನಿಯಲ್ಲಿ ಪ್ರಶ್ನಿಸಿದಳು--"ಕರುಣಾಮೂರ್ತಿಗಳೆ, ನೀವಾರು? ನಗರ ವಾಸಿಗಳು ಅಂಟುರೋಗವೆಂಬುದಕ್ಕಾಗಿ ಹೆದರಿ ನನ್ನನ್ನು ನಗರಸೀಮೆ ಯಿಂದ ಹೊರಗೆ ತಳ್ಳಿಬಿಟ್ಟಿದ್ದಾರೆ. ನೀವಿಷ್ಟು ದಯವಿಟ್ಟು................"

ಅಮೃತಸದೃಶ ವಾಣಿಯಲ್ಲಿ। ಭಿಕ್ಷು ಉತ್ತರಿಸಿದನು—"ನಾನು ಉಪ ಗುಪ್ತನಿರುವೆ ವಾಸವದತ್ತೆ! ಕೊಟ್ಟ ಮಾತಿನಂತೆ ಇಂದು ನಿನ್ನ ಬಳಿಗೆ ಬಂದಿದ್ದೇನೆ." (ಆರ್. ಸಿ. ದತ್ತರ ಲೇಖನ.)

■■■■■■■■■

೨. ದೀನದಯಾಳು

'ಬಲಖ್'ದ ರಾಜಾ ಖ್ವಾರಝುಮ್ ಒಂದು ದಿನ ಮುಂಜಾನೆ ತನ್ನ ಮಂತ್ರಿಗೆ ಅಪ್ಪಣೆಯಿತ್ತನು—"ನನ್ನ ಖಜಾನೆಯ ಕಣವನ್ನೆಲ್ಲ ನನ್ನೆದುರಿಗೆ ರಾಶಿಹಾಕು; ನನ್ನ ಸೈನಿಕರನ್ನೆಲ್ಲ ನನ್ನೆದುರಿಗೆ ಸಾಲಾಗಿ ನಿಲ್ಲಿಸು. ಅಂತಃ ಪುರದ ಒಂದು ಸಾವಿರ ಸುಂದರಿಯರನ್ನು ಅಲಂಕರಿಸಿ ಎದುರು ನಿಲ್ಲುವಂತೆ ಅಪ್ಪಣೆಕೊಡು."

ಆಜ್ಞೆಯನ್ನು ನೆರವೇರಿಸಲಾಯಿತು. ಬಾದಶಹನು ಕಣ್ಣೆತ್ತಿ ವೈಭವದ ತೆರೆಯೆಬ್ಬಿಸುತ್ತಿರುವ ಈ ಸಮುದ್ರವನ್ನು ನೋಡಿದನು. ಆದರೆ ಮರು ಕ್ಷಣವೇ ಅವನ ಕಂಗಳಿಂದ ನೀರು ಸುರಿಯತೊಡಗಿತು.

"ಎಲ್ಲವನ್ನೂ ನನ್ನೆದುರಿಂದ ದೂರಮಾಡು. ಇವು ನನ್ನ ಬಾಯಾ ರಿಕೆಯನ್ನು ತಣಿಸುವಂತಿಲ್ಲ. ಆಹಾ, ನಾನೆಷ್ಟು ಬಾಯಾರಿದ್ದೇನೆ. ಈ ಬಾಯಾರಿಕೆಯನ್ನು ಶಾಂತಗೊಳಿಸಲು ನಾನು ಏನೆಲ್ಲ ಮಾಡಿದೆ! ಶೇಖರು ಹೇಳಿದ ಮೇರೆಗೆ ನನ್ನ ಅತ್ಯಂತ ಪ್ರಿಯ ವಸ್ತು ಯುವರಾಜನನ್ನೂ ಆಹುತಿ ಗೊಂಡೆ. ಆದರೆ, ನನ್ನೊಳಗಿನ ಬೆಂಕಿ ತಣಿಯದಾಯಿತು. ನಾನು ಹುಡಿ ಗೂಡುತ್ತಿದ್ದೇನೆ. ಯಾರಾದರೂ ರಕ್ಷಿಸಿ!" ಬಾದಶಹನು ನೆಲಕ್ಕುರುಳಿ ಬಿಟ್ಟನು.

................ಗಾಢಾಂಧಕಾರದ ನಟ್ಟಿರುಳಲ್ಲಿ ಖ್ವಾರಝುವ್ ಸಾಯು ವುದಕ್ಕೆಂದು ಜನಶೂನ್ಯ ಕಾನನದತ್ತ ಹೊರಟನು...........ದಾರಿಯಲ್ಲಿ ರಾಣಿಯು ಕೋಣೆಯಿತ್ತು........ಸಣ್ಣ ರಾಜಪುತ್ರನಿಗೆ ಹಾಲುಕುಡಿಸುತ್ತಾ ಕುಡಿಸುತ್ತಾ ಅವಳು ನಿದ್ದೆಹೋಗಿದ್ದಳು. 'ಹೂಂ; ಸಾಯಲು' ಎಂದು ತಾತ್ಸಾರದಿಂದ ಅವನು ಮುಂದರಿದನು. ಆದರೆ—'ಎಲ್ಲಿಗೆ ಹೋಗುತ್ತಿ?' ಎಂದು ಹಿಂದಿನಿಂದಾರೋ ಕರೆದಂತಾಯಿತು. ಹಿಂದಿರುಗಿ ನೋಡಿದಾಗ— ಬೆಳದಿಂಗಳ ನಿಲುವಂಗಿಯನ್ನು ತೊಟ್ಟ ಭವ್ಯ ಪುರುಷನೊಬ್ಬನು ನಿಂತು ಮುಗುಳ್ನಗುತ್ತಿದ್ದನು.

"ಖ್ವಾರಝುವ್! ಮನುಷ್ಯನು ದಾರಿತಪ್ಪಿದಾಗೆಲ್ಲ ನನ್ನ ದಯಾ ಸಮುದ್ರವು ಉಕ್ಕಿಹರಿಯುತ್ತದೆ. ಆಗ ನಾನು ನನ್ನ ಅತಿ ಪ್ರಿಯ ಸಂತಾನ ವಾದ ಮನುಷ್ಯನಿಗೆ ಹೊಸ ದೃಷ್ಟಿಯನ್ನೀಯಲು ಓಡಿಬರುತ್ತೇನೆ. ಮನು ಷ್ಯನು ಸ್ವತಃ ತನ್ನನ್ನೇ ಬಲಿಗೊಡಬೇಕು. ಒಮ್ಮೆಯಾದರೂ ಅವನು ತನ್ನ ಅಂತರ್ಧ್ವನಿಗೆ ಕಿವಿಗೊಟ್ಟು, ನನ್ನನ್ನು ಅನುಸರಿಸಿದನೆಂದರೆ ಮತ್ತೆ ಅವನು ಹೀಗೆ ಅಲೆದಾಡಬೇಕಾಗುವುದಿಲ್ಲ............!"

ಖ್ವಾರಝುವ್ ಮೊಣಕಾಲೂರಿ ಹೇಳಿದನು: "ದೀನದಯಾಳು, ನೀನಲ್ಲದೆ ಇಷ್ಟು ಕರುಣೆಯನ್ನು ಮತ್ತಾರು ತೋರಿಸಬಲ್ಲರು?"

(ಶಮ್ಸ್–ಏ–ತಬರೇಜ್.)

■■■■■■■■■

೩. ಆತ್ಮದೀಪ

ಬರ್ಮಾದ ರಾಜಾ 'ಥೀಬಾ' ಆತ್ಮಜ್ಞಾನದಲ್ಲಿ ಜನಕನಂತೆಯೇ ಖ್ಯಾತಿ ಪಡೆದಿದ್ದನು. ರಾಜಸೀ ವೈಭವದಲ್ಲಿ ಮೆರೆದಾಡುತ್ತಿದ್ದರೂ ಅವನು ಸಮ್ಯಕ್ ದೃಷ್ಟಿಯನ್ನು ಪಡೆದಿದ್ದನು. ಒಂದು ರಾತ್ರಿ ಅಹಂಕಾರೀ ಭಿಕ್ಷು ವೊಬ್ಬನು ಅವನ ಬಳಿ ಬಂದನು. ಥೀಬಾ ಅವನನ್ನು ಚೆನ್ನಾಗಿ ಸತ್ಕರಿಸಿ ದನು. ಆದರೆ ಭಿಕ್ಷು ತುಂಬಾ ಆತುರನಾಗಿದ್ದನು. ಅವನು ಕುಳಿತು ಕೊಳ್ಳುತ್ತಲೇ ಹೇಳಿದನು: "ರಾಜನ್! ನಿಮ್ಮ ಜ್ಞಾನಯೋಗದ ಕೀರ್ತಿ ಯನ್ನು ನಾನು ತುಂಬಾ ಕೇಳಿದ್ದೇನೆ. ಆದರೆ, ಭೋಗಗಳ ಪ್ರಜ್ವಲಿತ ಅಗ್ನಿಯಲ್ಲಿದ್ದೂ ನೀವು ವಿರಕ್ತರಾಗಿದ್ದೀರೆಂಬುದರಲ್ಲಿ ನನಗೆ ವಿಶ್ವಾಸ ಹುಟ್ಟಿ

ವುದಿಲ್ಲ. ನಾನು ಎಷ್ಟೋ ವರ್ಷಗಳಿಂದ ಅಖಂಡ ತಪಸ್ಸನ್ನು ಆಚರಿಸುತ್ತಿದ್ದೇನೆ. ಆದರೆ, ನನಗಿದುವರೆಗೂ ಆತ್ಮದೃಷ್ಟಿ ದೊರೆಯಲಿಲ್ಲ. ನೀವದನ್ನು ಹೇಗೆ ಪಡೆದಿರಿ,—ತಿಳಿಸಿ, ನೋಡೋಣ!"

ಥೀಬಾನ ಮುಖದ ಮೇಲೆ ಮಂದಹಾಸವು ನಲಿದಾಡಿತು. "ನೀವು ಅಕಾಲದಲ್ಲಿ ಬಂದುಬಿಟ್ಟಿರಿ. ನಾನೀಗ ಯಾವುದೋ ವಿಚಾರದಲ್ಲಿ ಮುಳುಗಿದ್ದೇನೆ. ನಿಮ್ಮ ಪ್ರಶ್ನೆಗಳಿಗೆ ತುಸು ತಡೆದು ಉತ್ತರಕೊಡುವೆನು. ಅಷ್ಟರೊಳಗೆ ನೀವು ಈ ದೀಪವನ್ನು ತೆಗೆದುಕೊಂಡು ಹೋಗಿ ಅಂತಃಪುರದ ವೈಭವವನ್ನೆಲ್ಲ ನೋಡಿಬನ್ನಿ. ಹಾಂ, ಈ ದೀಪವು ನಂದಿಹೋಗದಂತೆ ಜಾಗ್ರತರಾಗಿರಿ. ನಂದಿಹೋದರೆ ನೀವು ದಾರಿ ತಪ್ಪಿಬಿಡುತ್ತೀರಿ. ಆಗ ನಿಮ್ಮನ್ನು ಹುಡುಕುವುದು ನಮಗೂ ಕಷ್ಟವಾಗುವುದು."

ಅಂತಃಪುರದ ವೈಭವವನ್ನು ಕಂಡು ಭಿಕ್ಷುವು ಹಿಂದಿರುಗಿದಾಗ ರಾಜರ್ಷಿ ಥೀಬಾ ಮುಗುಳ್ನಗುತ್ತಾ ಕೇಳಿದನು:—"ಅಂತಃಪುರದ ಸುಂದರಿಯರು ನಿಮಗೆ ಚೆಲುವೆಯರಾಗಿ ಕಂಡರೆ? ಅಪ್ಸರೆಯರ ಗಾನನೃತ್ಯಗಳು ಮನೋರಂಜನೆಯನ್ನುಂಟುಮಾಡಿದುವೆ?"

"ಮಹಾರಾಜ! ಅಂತಃಪುರದ ಮದನೋತ್ಸವದಲ್ಲಿ ನಾನು ಬಹು ಹೊತ್ತು ಕುಳಿತಿದ್ದೆನು. ಸಂಗೀತವನ್ನೂ ಕೇಳಿದೆನು. ನೃತ್ಯವನ್ನೂ ನೋಡಿದೆನು. ಆದರೆ, ನೋಡಿಯೂ ನೋಡಲಿಲ್ಲ,—ಕೇಳಿಯೂ ಕೇಳಲಿಲ್ಲ—ದೃಷ್ಟಿ ಯಾವಾಗಲೂ ಈ ದೀಪಜ್ವಾಲೆಯ ಮೇಲೆಯೇ ಇರುತ್ತಿತ್ತು. ಇದು ನಂದಿಹೋಗಬಾರದಷ್ಟೆ?"

"ಏಕೆ?" ಮಹಾರಾಜನು ಕೃತಿಮ ಆಶ್ಚರ್ಯದಿಂದ ಪ್ರಶ್ನಿಸಿದನು.

"ದೀಪ ನಂದಿದರೆ ದಾರಿ ತಪ್ಪಿ ಹೋಗುವುದೆಂದು ನೀವೇ ತಿಳಿಸಿದ್ದಿರಲ್ಲ? ಆದ್ದರಿಂದ ನಂದದಂತೆ ನೋಡಿಕೊಳ್ಳುತ್ತಿದ್ದೆ."

"ಹಾಗಿದ್ದರೆ ಭಿಕ್ಷುವರ್ಯರೆ! ಆತ್ಮದೃಷ್ಟಿಯ ರಹಸ್ಯ ನಿಮಗೀಗ ತಿಳಿದಂತಾಯಿತು."

ಭಿಕ್ಷುವಿನ ಮುಖವು ನಾಚಿಕೆಯಿಂದ ತಗ್ಗಿಹೋಯಿತು.

(ಬರ್ಮೀ ಕವಿ ಬಾಪೇಂ)

೫. ದೇಹ ಮತ್ತು ಮನಸ್ಸು

ಶ್ರಾವಸ್ತಿಯ ಆ ಶ್ರದ್ಧಾಳು ಭಿಕ್ಷುಗಳನ್ನು ಮಧುರವಾಣಿಯಲ್ಲಿ ಸಂಬೋಧಿಸುತ್ತಾ ಬೋಧಿಸತ್ವನು ಹೇಳಲಾರಂಭಿಸಿದನು:—

ಒಂದು ನಗರದ ಹೊರಗೆ ಒಂದು ಆಶ್ರಮವಿತ್ತು. ಅದರಲ್ಲಿ ಒಬ್ಬ ಪ್ರಸಿದ್ಧ ಸನ್ಯಾಸಿಯಿರುತ್ತಿದ್ದನು. ಅವನ ದಿನಚರ್ಯೆಯೆಲ್ಲವೂ ಧ್ಯಾನ ಭಜನೆಗಳಲ್ಲೇ ಕಳೆಯುತ್ತಿತ್ತು. ಅವನ ದಿವ್ಯೋಪದೇಶಗಳ ಕೀರ್ತಿ ಮಗಧ ದಿಂದ ಕಾಶಿಯ ವರೆಗೂ ಹಬ್ಬಿತ್ತು.

ಸನ್ಯಾಸಿಯ ಆಶ್ರಮದ ಬಳಿಯೇ ಬೇಟೆಗಾರನೊಬ್ಬನು ವಾಸಿಸು ತ್ತಿದ್ದನು. ಅವನು ದಿನಾಲೂ ಬೇಟೆಯಾಡಿ ತನ್ನ ಪರಿವಾರವನ್ನು ಪೋಷಿ ಸುತ್ತಿದ್ದನು. ಆಶ್ರಮಕ್ಕೆ ಬರುವ ಯಾತ್ರಿಕರು ಬೇಟೆಗಾರನನ್ನು ತಿರಸ್ಕಾರ ದೃಷ್ಟಿಯಿಂದ ಕಾಣುತ್ತಿದ್ದರು.

ವಯಸ್ಸು ತುಂಬುತ್ತಲೇ ಬೇಟೆಗಾರ ಸತ್ತುಹೋದನು ಮತ್ತು ಕೆಲ ದಿನಗಳಲ್ಲೇ ಸನ್ಯಾಸಿಯೂ ಸಮಾಧಿ ಹೊಂದಿದನು. ಜನರು ಸಮಾಧಿ ಸ್ಥಾನದಲ್ಲಿ ಒಂದು ಭವ್ಯದೇವಾಲಯವನ್ನು ಕಟ್ಟಿಸಿದರು. ಸಾಧುಗಳ ದೊಡ್ಡ ಗುಂಪೊಂದು ಅಲ್ಲಿ ಶ್ರದ್ಧಾಳು ಜನತೆಯಿಂದ ರಾಜಸೀ ಭೋಗಗಳನ್ನು ಪಡೆಯುತೊಡಗಿತು.

ಮೃತ್ಯುವಿನ ಬಳಿಕ ಅವರಿಬ್ಬರೂ ಯಮರಾಜನ ಬಳಿ ತಲುಪಿದರು. ಇಬ್ಬರ ಪಾಪಪುಣ್ಯಗಳನ್ನು ಲೆಕ್ಕಮಾಡಿ ಸನ್ಯಾಸಿಯನ್ನು ನರಕಕ್ಕೂ ಬೇಟೆ ಗಾರನನ್ನು ಸ್ವರ್ಗಕ್ಕೂ ಕಳಿಸಲಾಯಿತು.

ಸನ್ಯಾಸಿಯು ಕೋಪದಿಂದ ಕಿಡಿಕಿಡಿಯಾಗಿ ಯಮರಾಜನೊಡನೆ, ಈ ಅನ್ಯಾಯಕ್ಕೇನು ಕಾರಣವೆಂದು ಪ್ರಶ್ನಿಸಿದನು. ಯಮರಾಜನು ತುಸು ನಕ್ಕು ಹೇಳಿದನು: "ಸನ್ಯಾಸಿ! ನೀನು ದೇಹದಿಂದ ಮಾತ್ರ ಉಪಾಸನೆ ಮಾಡಿದೆ; ಮನಸ್ಸಿನಿಂದಲ್ಲ. ನಿನ್ನ ಮನಸ್ಸು ಯಾವಾಗಲೂ ವಿಲಾಸ ದುರಾಚಾರಗಳಲ್ಲಿ ಮುಳುಗಿರುತಿತ್ತು. ಇದಕ್ಕೆ ವಿರುದ್ಧವಾಗಿ, ಈ ಬೇಟೆ ಗಾರನ ದೇಹ ಮಾತ್ರ ನೀಚ ಉದ್ಯೋಗದಲ್ಲಿ ತೊಡಗಿತ್ತು. ಮನಸ್ಸಿನಲ್ಲಿ ಅವನು ನಿನ್ನಂತೆಯೇ ಧಾರ್ಮಿಕನಾಗಬೇಕೆಂದು ಹಾತೊರೆಯುತ್ತಿದ್ದನು."

"ಭಿಕ್ಷುಗಳೆ! ಧರ್ಮಗಳೆಲ್ಲ ಮೊದಲು ಮನದಲ್ಲಿ ಜನ್ಮತಾಳುತ್ತವೆ. ಏಕೆಂದರೆ, ಧರ್ಮಗಳೆಲ್ಲ ಮನೋಮಯಗಳು. ಮನುಷ್ಯನು ಮಲಿನ

ಮನದಿಂದ ಕೆಲಸಮಾಡಿದರೆ ಎತ್ತುಗಳ ಹಿಂದೆ ಗಾಡಿಯ ಚಕ್ರಗಳು ತಿರುಗು ವಂತೆ ದುಃಖ ಸಂತಾಪಗಳು ಯಾವಾಗಲೂ ಅವನನ್ನು ಹಿಂಬಾಲಿಸುತ್ತವೆ."

('ಧಮ್ಮಪದ'ದ ಆಧಾರ)

---

೫. ನೆರೆಹೊರೆ

ಎಷ್ಟು ಸುಂದರವಿತ್ತು ಆ ಸರೋವರ! ಆಕಾಶದ ಮೇಘಮಾಲೆಗಳು ತಮ್ಮ ಶೃಂಗಾರವನ್ನು ನೋಡಲೆಂದು ಭೂಮಿಯ ಮೇಲೆ ಈ ಕನ್ನಡಿಯನ್ನು ಇಟ್ಟಿರುವಂತೆ ಭಾಸವಾಗುತ್ತಿತ್ತು.

ಸರೋವರದ ತೀರದಲ್ಲಿ ಮನೋಹರವಾದೊಂದು ಪೊದೆಯಿತ್ತು. ಸರೋವರದಲ್ಲಿ ಮೀನುಗಳು ಸಂತೋಷದಿಂದ ಕುಣಿಯುತ್ತಿದ್ದರೆ ಗಿಡದ ಮೇಲಿನ ಪಕ್ಷಿಗಳು ಉಲ್ಲಾಸದಿಂದ ಹಾಡುತ್ತಿದ್ದವು.

ಅಕಸ್ಮಾತ್ ಒಂದು ಮೀನಿಗೂ ಒಂದು ಹಕ್ಕಿಗೂ ಗೆಳೆತನವಾಯಿತು. "ಸರೋವರದಲ್ಲಿ ಈಜಾಡುವಾಗ ತುಂಬ ಸಂತೋಷವಾಗುವುದಲ್ಲವೆ?"— ಹಕ್ಕಿ ಕೇಳಿತು.

ಅಹಂಕಾರದಿಂದ ದೂರವಿರುವವರಾರು! ಮೀನು ಸರೋವರದೊಳಗಿನ ವೈಚಿತ್ರ್ಯವನ್ನು ಮನಮೋಹಕ ರೀತಿಯಲ್ಲಿ ವರ್ಣಿಸಿತು.

"ಆಕಾಶದಲ್ಲಿ ಹಾರಾಡುವಾಗ ಹರ್ಷವಾಗುತ್ತದೆಯೇ?"—ಮೀನು ಕೇಳಿತು.

ಪಕ್ಷಿಯು ಮಹಾಕವಿಯಂತೆ ಕಾವ್ಯಾತ್ಮಕ ಶೈಲಿಯಲ್ಲಿ ಆಕಾಶವನ್ನು ವರ್ಣಿಸಿತು; ಮೀನು ಮನದೊಳಗೆ ಕಳವಳಿಸುತಿತ್ತು.

ಮತ್ತೊಮ್ಮೆ ಅವೆರಡೂ ಸರೋವರ ತೀರದಲ್ಲಿ ಪುನಃ ಭೇಟಿಯಾದವು. ಮೀನು ನೀರಿಂದ ಹೊರಹೊರಡುತ್ತಿತ್ತು. ಹಕ್ಕಿ ನೀರಿಗಿಳಿಯುತಿತ್ತು. ಗಿಡವನ್ನೇರಿ ಆಕಾಶದಲ್ಲಿ ಹಾರಾಡಬೇಕೆಂಬ ಉತ್ಕಟ ಇಚ್ಛೆ ಮೀನಿಗಿತ್ತು. ಆದರೆ, ಅದು ಗಿಡದ ಬುಡಕ್ಕೆ ತಲಪುವ ಮೊದಲೇ ವಿಲಿವಿಲಿ ಒದ್ದಾಡಿ ಸತ್ತುಹೋಯಿತು. ಪಕ್ಷಿಯೂ ಸರೋವರದ ತಳವನ್ನು ಮುಟ್ಟದಾಯಿತು. ನೀರಿಗಿಳಿಯುತ್ತಲೇ ಉಸಿರುಗಟ್ಟಿ ಸತ್ತಿತು.

ಆ ದಿನ ದಡದ ಹಕ್ಕಿಗಳು ಪರಸ್ಪರ ಹೀಗೆ ಮಾತಾಡಿಕೊಳ್ಳುತ್ತಿದ್ದವು:

"ಪೊದೆಯು ಹತ್ತಿರವೇ ಈ ಸರೋವರವಿದ್ದುದು ಅದೆಷ್ಟು ಒಳಿತಾಯಿತು! ಇದೇ ರೀತಿ ಆಗಾಗ್ಗೆ ತಿನ್ನಲು ಮೀನುಗಳಾದರೂ ನಮಗೆ ಸಿಗಬಹುದು."

ಇತ್ತ ಸರೋವರದಲ್ಲಿ ಮೀನುಗಳೂ ಮಾತಾಡಿಕೊಳ್ಳುತ್ತಿದ್ದವು— "ನಮ್ಮ ಸರೋವರದ ಬಳಿಯೇ ಈ ಪೊದೆಯಿದ್ದುದು ಅದೆಷ್ಟು ಸಂತಸದ ಸಂಗತಿ! ಇದೇ ರೀತಿ ಆಗಾಗ್ಗೆ ನಮಗೆ ತಿನ್ನಲು ಹಕ್ಕಿಗಳಾದರೂ ದೊರೆಯ ಬಹುದು."

(ವಿ. ಸ. ಖಾಂಡೇಕರ್)

▪▪▪▪▪▪▪▪▪

೬. ಮನುಷ್ಯನ ಸ್ವಪ್ನ

ಆ ಭವ್ಯ ಭವನವು ಪೂರ್ಣವಾದಾಗ ದರ್ಶಕರ ಗುಂಪೇ ಮುತ್ತಿಗೆ ಹಾಕಿತು.

"ಸ್ವರ್ಗದ ಭವನವನ್ನೇ ಭೂಮಿಯ ಮೇಲೆ ತಂದಿರಿಸಿದಂತಿದೆ"— ಒಬ್ಬನೆಂದನು.

"ಇಡೀ ಪ್ರಪಂಚದಲ್ಲೇ ಇಷ್ಟು ದೃಢ ಹಾಗೂ ಸುಂದರವಾದ ಭವನ ಬೇರೆಲ್ಲೂ ಇಲ್ಲವಂತೆ"— ಇನ್ನೊಬ್ಬನೆಂದನು.

"ಲಕ್ಷಗಟ್ಟಲೆ ಕೂಲಿಗಾರರು, ಸಾವಿರಾರು ಇಂಜಿನಿಯರರು ಮತ್ತು ಅಸಂಖ್ಯಾತ ವಿಶೇಷಜ್ಞರೂ ಸೇರಿ ಇದನ್ನು ಹದಿನೈದು ವರ್ಷಗಳಲ್ಲಿ ಸಿದ್ಧ ಗೊಳಿಸಿದರು"— ಮತ್ತೊಬ್ಬನೆಂದನು.

"ಎಷ್ಟು ಕೋಟಿ ರೂಪಾಯಿಗಳು ಖರ್ಚಾದುವೋ"— ಮಗದೊಬ್ಬ ಉದ್ಗರಿಸಿದನು.

"ಕನಿಷ್ಠ ಪಕ್ಷ ಪ್ರಳಯಕಾಲದ ವರೆಗೂ ಇದರ ಅಸ್ತಿವಾರವು ಅಲು ಗಾಡದೆಂದು ಪ್ರಪಂಚದ ದೊಡ್ಡ ದೊಡ್ಡ ಇಂಜಿನಿಯರರ ಅಭಿಪ್ರಾಯ"— ಆಶ್ಚರ್ಯಚಕಿತನಾಗಿ ದರ್ಶಕನೊಬ್ಬನು ಕೂಗಿ ಹೇಳಿದನು.

ಅದೇ ದಿನ ಸಂಜೆ ಭೂಕಂಪದ ಆಘಾತಕ್ಕೆ ಗುರಿಯಾಗಿ ಆ ಭವ್ಯ ಭವ ನವು ಕ್ಷಣಾರ್ಧದೊಳಗೆ ಭೂಗರ್ಭದಲ್ಲಿ ಸೇರಿಹೋಯಿತು.

(ವೈಕುಂಠನಾಥ ಮೆಹರಾತ್ರಾ)

▪▪▪▪▪▪▪▪▪

೭. ದೇವತೆಯ ಹೃದಯ

ಊರಿನ ಸೀಮೆಯಿಂದ ದೂರ ನಿರ್ಜನ ಸ್ಥಾನದಲ್ಲಿ ಒಂದು ಮರದ ಕೆಳಗೆ ಆ ಕಲ್ಲು ಬಿದ್ದಿತ್ತು. ಬೇಸಗೆಯ ಸುಡುಬಿಸಿಲು, ಮಳೆಗಾಲದ ನಿಡು ಧಾರೆ ಮತ್ತು ಚಳಿಗಾಲದ ಕೊರೆಗಾಳಿ--ಇವೆಲ್ಲವನ್ನೂ ಆ ಕಲ್ಲು ಸಹಿಸುತ್ತಿತ್ತು. ಗೊಲ್ಲರು ಆ ಕಲ್ಲ ಮೇಲೆ ಸೆಗಣಿಯನ್ನೊರಸುತ್ತಿದ್ದರು. ನಸುಕಿನಲ್ಲೆದ್ದು ತಲೆಯ ಮೇಲೆ ತರಕಾರಿಯ ಹೊರೆಹೊತ್ತು ಊರೂರಿಗೆ ಸಾಗುತ್ತಿರುವ ಹೆಂಗಸರು ಆ ಕಲ್ಲ ಮೇಲೆ ತಮ್ಮ ಹೊರೆಗಳನ್ನಿಟ್ಟು ಭಾರವನ್ನು ಕಡಿಮೆಮಾಡಿಕೊಳ್ಳುತ್ತಿದ್ದರು. ಅಲ್ಲದೆ ಸಂಜೆ ಆಲೆದಾಡುವ ಪೋಲಿ ಹುಡುಗರು ಆ ಕಲ್ಲಿಗೆ ದೂರದಿಂದಲೇ ಕಲ್ಲೆಸೆದು ತಮ್ಮ ಗುರಿ ಹೊಡೆಯುವ ಜಾಣ್ಮೆಯನ್ನು ಪ್ರದರ್ಶಿಸುತ್ತಿದ್ದರು.

ಸಮೀಪದಲ್ಲೇ ಇದ್ದ ಮರ ಆ ಕಲ್ಲಿನ ದುರ್ಗತಿಯನ್ನು ಕಂಡು ಮನದಲ್ಲೇ ತುಂಬಾ ಪ್ರಸನ್ನವಾಗುತ್ತಿತ್ತು. ಮರದಲ್ಲಿದ್ದ ಸಣ್ಣ ಸಣ್ಣ ಹೂಗಳು ಕಲ್ಲಿನ ಇಂತಹ ಅಪಮಾನಿತ ಜೀವನವನ್ನು ಕಂಡು ಕಿಲಕಿಲನೆ ನಕ್ಕು ಬಿಡುತ್ತಿದ್ದವು. ಅಕ್ಕಪಕ್ಕದವರಾರೂ ಅದನ್ನು ಸಹಾನುಭೂತಿಯಿಂದ ಕಾಣುತ್ತಿದ್ದಿಲ್ಲ. ಆ ಕಲ್ಲೂ ಮೌನವಾಗಿ ಎಲ್ಲವನ್ನೂ ತಾಳ್ಮೆಯಿಂದ ಸಹಿಸಿಕೊಂಡಿತ್ತು.

ಒಂದು ದಿನ ಶಿಲ್ಪಿಯೊಬ್ಬನು ಎಲ್ಲಿಂದಲೋ ಆ ಗ್ರಾಮದ ಕಡೆ ಬರುತ್ತಿದ್ದನು. ಆ ಊರಿನಲ್ಲೊಂದು ದೇಗುಲ ಸಿದ್ಧವಾಗುತಿತ್ತು. ದೇವರಮೂರ್ತಿಯನ್ನು ತಯಾರಿಸುವ ಕಾರ್ಯ ಅವನಿಗೆ ಒಪ್ಪಿಸಲ್ಪಟ್ಟಿತ್ತು. ಶಿಲ್ಪಿಯು ಬಹುದೂರದಿಂದ ಬರುತ್ತಿದ್ದನು. ಆದ್ದರಿಂದ ದಣಿವಾರಿಸಿಕೊಳ್ಳಲೆಂದು ಆ ಮರದ ಕೆಳಗೆ ಕುಳಿತುಕೊಂಡನು. ಅಲ್ಲಿ ಅವನ ದೃಷ್ಟಿ ಸಮೀಪವೇ ಬಿದ್ದಿದ್ದ ಕಲ್ಲಿನ ಕಡೆ ಹರಿಯಿತು. ಅರಸುತ್ತಿದ್ದ ಬಳ್ಳಿಯೇ ಅನಾಯಾಸವಾಗಿ ಸಿಕ್ಕಿದಂತಾಯಿತು. ಅವನು ಆ ಕಲ್ಲನ್ನು ಕೆತ್ತಿ ಒಂದು ಪ್ರತಿಮೆಯ ರೂಪದಲ್ಲಿ ಅದನ್ನು ನಿಲ್ಲಿಸಿಬಿಟ್ಟನು.

ಹೊಸ ದೇಗುಲದಲ್ಲಿ ವೇದ ಮಂತ್ರಗಳ ಘೋಷದೊಂದಿಗೆ ಆ ಪ್ರತಿಮೆಯನ್ನು ಪ್ರತಿಷ್ಠಿಸಲಾಯಿತು. ಊರೂರಿಂದ ದರ್ಶಕರು ಬಂದು ದೇವರನ್ನು ಪೂಜಿಸಲಾರಂಭಿಸಿದರು.

ದೇವತೆಯಾದ ಆ ಕಲ್ಲು ಮನದಲ್ಲೇ ಬಹಳ ಪ್ರಸನ್ನವಾಗಿತ್ತು. ಒಂದು ದಿನ ಭಕ್ತನೊಬ್ಬನ ಮೂಲಕ ಕೆಲವು ಹೂಗಳನ್ನು ಪ್ರತಿಮೆಯ ಕಾಲುಗಳ ನೇಲೆ ಏರಿಸಲಾಯಿತು. ಆ ಹೂಗಳನ್ನು ಕಲ್ಲು ತಿಳಿದಿತ್ತು.

ಉಪಹಾಸ ಮಾಡಿದ ಮರದ ಹೂಗಳವು! ಕಲ್ಲಿಗೆ ಹಿಂದಣ ಕಾಲ ನೆನಪಾಯಿತು. ಅದು ತುಸು ನಕ್ಕಿತು; ಮತ್ತು ದೇವತೆಗನುರೂಪವಾದ ಕ್ಷಮಾಭರಿತ ದೃಷ್ಟಿಯಿಂದ ಆ ಹೂಗಳ ಕಡೆ ನೋಡಿತು. ಅಲ್ಲದೆ ಅವನ್ನು ಪ್ರೀತಿಯಿಂದ ಸ್ವೀಕರಿಸಿತು. (ಅವಿನಾಶ ಖಾಂಡೇಕರ್)

೮. ಯಾಚನೆ

ಇಬ್ಬನಿಯಿಂದ ಕಮಲಗಳೆಲ್ಲ ಮುದುಡಿ ಹಾಳಾಗಿ ಹೋಗಿದ್ದುವು. ಆದರೆ ಮಾಲೀ ಸುದಾಸನು ಬಹು ಪರಿಶ್ರಮದಿಂದ ಉದ್ಯಾನದ ಕೆರೆಯಲ್ಲಿ ಒಂದು ಸುಂದರ ಕಮಲವನ್ನಿರಿಸಿದ್ದನು. ಮೊಗ್ಗು ಪೂರ್ಣವಾಗಿ ಅರಳಿದಾಗ ಅವನು ಅದನ್ನು ರಾಜನಿಗೆ ಕಾಣಿಕೆಯಾಗಿ ಕೊಡಲೆಂದು ಅರಮನೆಯ ಕಡೆ ಹೊರಟನು. ಅರಮನೆಯ ಬಾಗಿಲಲ್ಲೇ, ವೈಭವಶಾಲೀ ಮನುಷ್ಯನೊಬ್ಬನು ಅಕಾಲದಲ್ಲರಳಿದ ಆ ಅಪೂರ್ವ ಪುಷ್ಪವನ್ನು ಕೊಂಡುಕೊಳ್ಳಲು ಆತುರನಾದನು.

"ಮಾಲಿ,ಭಗವಾನ್ ಬುದ್ಧರು ಇಂದು ಈ ನಗರವನ್ನು ತಮ್ಮ ಪಾದ ಧೂಳಿಯಿಂದ ಪವಿತ್ರಗೊಳಿಸಿದ್ದಾರೆ. ಈ ಕಮಲವನ್ನು ನೀನೆನಗೆ ಮಾರಿಬಿಡು. ನಾನಿದನ್ನು ಅವರ ಪಾದಾರವಿಂದಗಳಿಗೆ ಸಮರ್ಪಿಸುತ್ತೇನೆ. ಇದಕ್ಕೆಷ್ಟು ಬೆಲೆ?"

"ಒಂದು ಮಾಷ ಚಿನ್ನ!"

ಆಗಲೇ ರಾಜಸೀ ಪೋಷಾಕನ್ನು ಧರಿಸಿದ ಪ್ರಸೇನಜಿತ್ ರಾಜರೂ ಭಗವಾನ್ ಬುದ್ಧರ ಪೂಜೆಗೆಂದು ಹೊರಬಂದರು. ಮಾಲಿಯ ಕೈಯಲ್ಲಿದ್ದ ಕಮಲದ ಅಲಭ್ಯಪುಷ್ಪವನ್ನು ಕಂಡು ಅವರು ಪ್ರಸನ್ನರಾದರು–"ಸುದಾಸ್, ಈ ಹೂವಿಗೆಷ್ಟು ಬೆಲೆ? ತಾ, ನನಗದನ್ನು ಮಾರಿಬಿಡು. ನಾನಿದನ್ನು ಪ್ರಭುಗಳ ದಿವ್ಯಚರಣಗಳಿಗೇರಿಸಿಬಿಡುತ್ತೇನೆ."

"ರಾಜನ್,ನಾನು ಒಂದು ಮಾಷ ಚಿನ್ನಕ್ಕೆ ಇದನ್ನು ಇವರಿಗೆ ಮಾರಿಬಿಟ್ಟಿದ್ದೇನೆ!"

"ಮಾಲಿ, ನಾನು ಹತ್ತು ಮಾಷ ಚಿನ್ನ ಕೊಡುತ್ತೇನೆ. ಹೂವನ್ನು ನನಗೇ ಕೊಡು"— ರಾಜನು ಆಶಾಭರಿತದೃಷ್ಟಿಯಿಂದ ಅತ್ತ ನೋಡಿದನು.

"ಮಾಲಿ, ನಾನು ಇಪ್ಪತ್ತು ಮಾಷ ಚಿನ್ನ ಕೊಡುವೆ"—ಶ್ರೀಮಂತ ನೆಂದನು.

ಇಬ್ಬರಲ್ಲೂ ಸ್ಪರ್ಧೆಯುಂಟಾಯಿತು. ಹೂವಿನ ಬೆಲೆ ಏರುತ್ತ ಹೋಯಿತು.

ಕೊನೆಗೆ ಮಾಲಿಯು—"ಕ್ಷಮಿಸಿ, ನಾನಿದನ್ನು ಮಾರುವುದೇ ಇಲ್ಲ" ಎಂದು ಹೇಳಿ ಓಡುತ್ತಾ ನೇರಾಗಿ ಆನಂದಮೂರ್ತಿ ಭಗವಾನ್ ಬುದ್ಧರಲ್ಲಿಗೆ ತಲುಪಿದನು. ಅವರ ನಿಶ್ಚಲ ಅಧರಗಳಿಂದ ಕಾರುಣ್ಯಾಮೃತವು ಹೊರಸೂಸು ತ್ತಿತ್ತು. ಸುದಾಸನು ಕೃತಾರ್ಥನಾದನು. ಅವನು ಸಾಷ್ಟಾಂಗವಾಗಿ ನಮಸ್ಕ ರಿಸಿ ಆ ಕಮಲವನ್ನು ಅವರ ಪಾವನಚರಣಗಳ ಮೇಲೆ ಏರಿಸಿದನು. ಪ್ರಭು ಗಳ ಮುಖದ ಮೇಲೆ ಮಂದಹಾಸ ಮಿನುಗಿತು. ಅಮೃತ ಸಮಾನವಾದ ಮಧುರವಾಣಿಯಲ್ಲಿ ಅವರು 'ವತ್ಸ, ನಿನಗೇನು ಬೇಕು?' ಎಂದು ಕೇಳಿದರು.

ಸುದಾಸನು ಆನಂದಾಶ್ರುಗಳನ್ನು ಸುರಿಸುತ್ತಾ ಹೇಳಿದನು: 'ಬೇರೇನೂ ಬೇಡ ಪ್ರಭು! ನಿಮ್ಮ ಪಾದಧೂಳಿಯ ಒಂದು ಕಣವನ್ನು ಕರುಣಿಸಿರಿ.'

(ರವೀಂದ್ರನಾಥ ಠಾಕೂರ್)

೯. ದಿವ್ಯದೃಷ್ಟಿಯ ಹಟ

ಬಹಳ ಹಿಂದಿನ ವಿಚಾರ. ಚಿನ್ ಜೆ. ಹ್ವಾಜ್ ಚೀನದ ಬಾದಶಹ ನಾಗಿದ್ದನು. ನ್ಯಾಯ ಹಾಗೂ ಪ್ರಜಾವಾತ್ಸಲ್ಯದ ಬಗ್ಗೆ ಅವನು ಸಪ್ತದ್ವೀಪಗ ಳಲ್ಲಿ ಪ್ರಸಿದ್ಧನಾಗಿದ್ದನು. ಅವನು ನ್ಯಾಯಾಸನದಲ್ಲಿ ಕುಳಿತಾಗ ಅವನ ನ್ಯಾಯ ಹಾಗೂ ವಿವೇಕವನ್ನು ಕಂಡು ದೇವತೆಗಳು ಕೂಡ ತಲೆತಗ್ಗಿಸು ತ್ತಿದ್ದರು ಅವನ ವಾಣಿಯಲ್ಲಿ ಸತ್ಯವು ತುಂಬಿತುಳುಕುತ್ತಿತ್ತು.

ಆದರೆ, ಬಾದಶಹನಿಗೆ ಈ ನ್ಯಾಯದಿಂದ ಸಂತೋಷವಾಗುತ್ತಿದ್ದಿಲ್ಲ. ತನ್ನನ್ನು ಅಂತರ್ಯಾಮಿಯಾಗಿ ಮಾಡೆಂದು ಅವನು ಯಾವಾಗಲೂ ದೇವರನ್ನು ಬೇಡಿಕೊಳ್ಳುತ್ತಿದ್ದನು. ಆಗ ತಾನು ಮನುಷ್ಯರ ಮನಸ್ಸಿನಲ್ಲಿ ಹುದುಗಿದ ಭಾವನೆಗಳನ್ನು ತಿಳಿಯಬಹುದೆಂಬ ಆಸೆ ಅವನಿಗೆ. ದೇವರು ಅವನಿಗೆ ಬಹುರೀತಿಯಿಂದ ಬುದ್ಧಿ ಹೇಳಿದರು. ಆದರೆ, ಅವನು ತನ್ನ

ಹಟವನ್ನು ಬಿಡಲಿಲ್ಲ. ಕಟ್ಟಕಡೆಗೆ ಬಾದಶಹನ ಆಸೆಯು ಈಡೇರಿತು. ಅವನು ಅಂತರ್ಯಾಮಿಯಾದನು.

ಮರುದಿನ, ತನ್ನ ಕಂಗಳು ಸೂರ್ಯಪ್ರಕಾಶಕ್ಕಿಂತಲೂ ಪ್ರಖರವಾಗಿವೆಯೆಂದೂ ಅವುಗಳ ಸಹಾಯದಿಂದ ಎಲ್ಲರ ಹೃದಯವನ್ನೂ ತೆರೆದ ಪುಸ್ತಕದಂತೆ ತಾನು ಓದಬಲ್ಲೆನೆಂದೂ ಅವನಿಗರಿವಾಯಿತು. ಅವನು ಲಕ್ಷ್ಯಗೊಟ್ಟು ತನ್ನ ಪರಿವಾರ ಹಾಗೂ ಪ್ರಜೆಯ ವಿಚಾರಗಳನ್ನು ಓದತೊಡಗಿದನು. ಪರಿಣಾಮವೇನಾಯಿತು ಬಲ್ಲಿರಾ? ಅವನ ದರಬಾರಿಗಳು ಅವನನ್ನು ಸಿಂಹಾಸನದಿಂದ ತಳ್ಳಿಹಾಕಲು ಯತ್ನಿಸುತ್ತಿದ್ದಾರೆ. ಅವನ ರಾಣಿಯು ವಿದ್ರೋಹಿಗಳಿಗೆ ಸಹಕಾರ ನೀಡಬೇಕೆಂದು ಯೋಚಿಸುತ್ತಿದ್ದಾಳೆ. ಅವನ ಸೇನಾಪತಿಯು ಶತ್ರುರಾಜನೊಬ್ಬನಿಗೆ ಚೀನದ ಮೇಲೆ ದಾಳಿಯಿಡಲು ಸಹಾಯಮಾಡಬೇಕೆಂದಿದ್ದಾನೆ. ಅವನ ಮಗನೇ 'ನನ್ನ ತಂದೆಯು ಬೇಗನೆ ಸಾಯಲೆ'ಂದು ದೇವರೊಡನೆ ಪ್ರಾರ್ಥನೆಮಾಡುತ್ತಿದ್ದಾನೆ. ಪ್ರಜೆಗಳೂ ತಮ್ಮ ನೆರೆಹೊರೆಯವರನ್ನು ಸುಲಿಯಲು ಹೊಂಚು ಹಾಕುತ್ತಿದ್ದಾರೆ. ಯೋಗಿಗಳ ಮನವೂ ಭೋಗವಿಲಾಸಕ್ಕಾಗಿ ಆತುರ ತಾಳಿದೆ........ಇವೆಲ್ಲವನ್ನೂ ಅವನು ಕಂಡುಕೊಂಡನು. ಒಮ್ಮೆ ಚೀತ್ಕರಿಸಿ ಬಾದಶಹನು ಕಣ್ಣು ಮುಚ್ಚಿದನು. ಅವನೆದುರಿಗೆ ವಿಚಿತ್ರ ಸಂಕಟಗಳಿದ್ದುವು. ಎಲ್ಲ ಪ್ರಜೆಗಳನ್ನೂ ಕೊಲ್ಲಿಸಿಬಿಡಬೇಕೆ? ಅಥವಾ ಈ ಎಲ್ಲ ಸಂಕಟಗಳಿಂದ ಪಾರಾಗುವುದಕ್ಕಾಗಿ ಓಡಿಹೋಗಬೇಕೆ?–ಎಂದು ತಿಳಿಯದಾಯಿತು. ತನ್ನ ಸುತ್ತಲೂ ಕೆಡುಕುಗಳ ಉರಿ ಹತ್ತಿದಂತೆ ತೋರಿಬಂತು. ಕಟ್ಟಕಡೆಗೆ ಈ ಸಂತಾಪವನ್ನು ತಾಳಲಾರದೆ ಅವನು ದೇವರಿಗೇ ಮೊರೆಯಿಟ್ಟನು:—

"ದೇವಾಧಿದೇವ! ನಿನ್ನೀ ದಾನವನ್ನು ಹಿಂದೆಗೆದುಕೋ. ನನಗೆ ನಿನ್ನ ಅಂತರ್ಯಾಮಿತ್ವವು ಬೇಡವೇ ಬೇಡ. ಅದು ನಿನಗೇ ಇರಲಿ. ನಾನು ನಿನ್ನ ಪವಿತ್ರ ಕರುಣೆಯ ತಣ್ಣೆಳಲಲ್ಲಿ ಕುಳಿತು ನಿನ್ನ ಇಷ್ಟವನ್ನು ಪೂರ್ತಿಗೊಳಿಸುವ ಮನುಷ್ಯನಾಗುವಂತೆ ಮಾಡು. ಈ ನರಕದಿಂದ ನನ್ನನ್ನು ಕಾಪಾಡು. ದಯೆಯ ಆ ವರದಹಸ್ತವನ್ನು ಪುನಃ ನನ್ನ ತಲೆಯ ಮೇಲಿಡು ....ನನ್ನನ್ನು ಮರಳಿ ಮನುಷ್ಯನನ್ನಾಗಿ ಮಾಡು!"

(ಲಿ. ಹೋರ್ಜ್ ಚೋರ್ಜ್.)

■■■■■■■■■

೧೦. ಕಾಲ್ದಾರಿ

ಹೊರಡುವಾಗ ಎರಡೂ ಒಟ್ಟೊಟ್ಟಿಗೇ ಹೊರಟಿದ್ದವು. ರಸ್ತೆಯು ಎಡಕ್ಕೂ ಕಾಲ್ದಾರಿಯು ಬಲಕ್ಕೂ ಇತ್ತು. ರಸ್ತೆಯ ಮೇಲೆ ಲಾರಿ ಹೋಗುತಿತ್ತು, ಮೋಟರ್ ಹೋಗುತ್ತಿತ್ತು............ನಾಗರಿಕರೂ ಸಾಗುತ್ತಿದ್ದರು........ಆನೆ, ಕುದುರೆ, ರಥ, ಗಾಡಿ—ಎಲ್ಲವೂ ಹೋಗುತ್ತಿದ್ದವು. ಇಕ್ಕಡೆಗಳಲ್ಲೂ ಮರಗಳ ಸಾಲುಗಳಿದ್ದವು. ನೆರಳಿತ್ತು, ಬಿಸಿಲಿತ್ತು, ವಿಲಾಸವಿತ್ತು, ವಿಶ್ರಾಂತಿಯಿತ್ತು. ಅಲ್ಲದೆ ಮೈಲುಕಲ್ಲುಗಳಿಂದಾಗಿ ನಡೆದ ದೂರ ಇಷ್ಟೇ ಎಂದು ಹೇಳಲು ಬರುವಂತಿತ್ತು.

ಆದರಾಚೆಗಿನ ಕಾಲ್ದಾರಿಗೆ ಇದಾವ ಸೌಕರ್ಯವೂ ಇದ್ದಿಲ್ಲ. ಕೆಲವು ಕಾಡು ಹಾಗೂ ನಾಡು ಪ್ರಾಣಿಗಳು ಇದನ್ನು ಹಾರಿ ದಾಟುತ್ತಿದ್ದವು. ಏರಿಳಿತ, ಓರೆಕೋರೆ, ಕಲ್ಲುಮುಳ್ಳು—ಇವುಗಳ ಮಧ್ಯೆ ಕೆಲವೆಡೆ ಕಾಲ್ದಾರಿ ಕಾಣುತ್ತಿತ್ತು; ಹಲವೆಡೆ ಮಾಯವಾಗುತ್ತಿತ್ತು. ಕೆಲವೆಡೆ ಚರಣ ರೇಖೆಯು ತೋರುವುದುಂಟು.

ಈಗ ರಸ್ತೆ ಬೇರಾಗಿ ನಡೆಯತೊಡಗಿತು, ಕಾಲ್ದಾರಿ ದೂರ—ಅತಿ ದೂರವಾಗತೊಡಗಿತು. ರಸ್ತೆ, ಹಳ್ಳ, ತೋಡುಗಳನ್ನು ಸೇತುವೆಯ ಸಹಾಯದಿಂದ ಕೆಳಗೆ ಹಾಕಿ ಮುಂದರಿಯಿತು. ಆದರೆ ಕಾಲ್ದಾರಿಯು ಅವುಗಳಲ್ಲೇ ವಿಲೀನವಾಗಿ ಹೊಸಜನ್ಮ ಪಡೆಯಿತು. ರಸ್ತೆಯು ಬೆಟ್ಟದೆದೆಯನ್ನು ಸೀಳಿ ಇಕ್ಕಡಿಗೈದಿತು. ಕಾಲ್ದಾರಿಯು ತಲೆಯ ಮೇಲಿಂದ ದಾರಿಯನ್ನು ಕಂಡುಕೊಂಡಿತು.

ಕಾಲ್ದಾರಿ ಏಕಾಕಿಯಾಗಿಯೇ ಮುಂದರಿಯುತ್ತಿತ್ತು. ಆದರೆ ರಸ್ತೆ ಮಾತ್ರ ವಾದ್ಯಘೋಷ ಹಾಗೂ ಸುಖಸಾಧನಗಳ ವೈಭವವಾಗಿತ್ತು. ಕಾಲ್ದಾರಿಯು ತನ್ನ ಕಾಲುಗಳಿಂದಲೇ ಆದುದು, ಆದರೆ ರಸ್ತೆಯು ಕಾಲುಗಳಿಂದಲ್ಲ—ಕಾಲುಗಳಿಗಾಗಿ ತಯಾರಿಸಲಾಗಿತ್ತು.

ರಸ್ತೆಯ ಮೇಲೆ ಆನಂದಗೀತವನ್ನು ಹಾಡುತ್ತ ಶ್ರೀಮಂತರು ಹೋಗುತ್ತಾರೆ; ಕಾಲ್ದಾರಿಯ ಮೇಲೆ ಬಡತನದಿಂದ ಬೆಂದು ಬೇಗುದಿಗೊಂಡು ನಿರಾಶರಾದವರು ಬಾಳಿನ ಗೋಳನ್ನು ಹಾಡುತ್ತ ಹೋಗುತ್ತಿದ್ದಾರೆ.

ಮುಂದೆ ಒಂದೆಡೆ ರಸ್ತೆ-ಕಾಲ್ದಾರಿಗಳೆರಡು ಭೇಟಿಯಾದವು.

"ನಾನು ಸಿಮೆಂಟಿನಿಂದ ಮಾಡಲ್ಪಟ್ಟಿದ್ದೇನೆ. ಡಾಮರಿನಿಂದಲೂ ಕಲ್ಲುಗಳಿಂದಲೂ ನಾನು ಅಲಂಕೃತನಾಗಿದ್ದೇನೆ. ನಾನು ನಿರ್ಮಲನೂ ಸುಂದರನೂ ಆಗಿದ್ದೇನೆ. ನನ್ನ ಮೇಲೆ ಸಣ್ಣ ಹುಲ್ಲುಕಡ್ಡಿಯೂ ಬೆಳೆಯಲಾರದು"—ರಸ್ತೆ ಹೇಳಿತು.

"ನಮ್ಮಿಬ್ಬರಲ್ಲಿ ಇದೇ ವ್ಯತ್ಯಾಸ. ನನ್ನ ಮೇಲೆ ಯಾವ ವಸ್ತುವೂ ಬೆಳೆಯಬಲ್ಲುದು; ನಾನು ಸಸ್ಯಶ್ಯಾಮಲೆಯಾದ ಭೂಮಿಯನ್ನು ಬಂಜೆಗೊಳಿಸಲಿಲ್ಲ. ಮಾತೃಭೂಮಿಯ ಗೌರವವನ್ನು ನಷ್ಟಪಡಿಸಲಿಲ್ಲ. ನಿನ್ನಂತೆ ನಿಯಮೋಲ್ಲಂಘನಮಾಡಲಿಲ್ಲ"—ಕಾಲ್ದಾರಿಯೆಂದಿತು.

(ಮಾಖನಲಾಲ ಚತುರ್ವೇದೀ.)

▪▪▪▪▪▪▪▪▪

೧೧. ಬರಿಗೈಯಿಂದ ಹೇಗೆ ಕಳುಹಿಸಲಿ?

ಒಂದುಬಾರಿ ಮಹಾರಾಜ ರಣಜೀತಸಿಂಹರು ಎಲ್ಲಿಗೋ ಹೋಗುತ್ತಿದ್ದರು. ಆಗಲೇ ಎದುರಿನಿಂದ ಒಂದು ಕಲ್ಲು ಬಂದು ಅವರಿಗೆ ತಲುಪಿತು. ಸಿಪಾಹಿಗಳು ಸುತ್ತಲೂ ದೃಷ್ಟಿ ಹರಿಸಿದಾಗ ಮುದುಕಿಯೊಬ್ಬಳು ಕಾಣಿಸಿದಳು. ಮುದುಕಿಯು ರಾಜನನ್ನು ಕಾಣುತ್ತಲೇ ಭಯದಿಂದ ನಡುಗಿ........"ಮಹಾರಾಜ; ನನ್ನ ಮಗನು ನಿನ್ನೆಯಿಂದ ಹಸಿದಿದ್ದನು. ಮನೆಯಲ್ಲಿ ತಿನ್ನಲು ಏನೂ ಇದ್ದಿಲ್ಲ. ಮರಕ್ಕೆ ಕಲ್ಲು ಹೊಡೆದು ಕೆಲವು ಬುಗರಿಹಣ್ಣುಗಳನ್ನು ಬೀಳಿಸಿ ಅವನಿಗೆ ತಿನ್ನಿಸಬೇಕೆಂದು ಬಯಸಿದ್ದೆ. ಆದರೆ ಆ ಕಲ್ಲು ನಿಮಗೆ ಬಂದು ತಗಲಿತು. ನನ್ನ ಅಪರಾಧವನ್ನು ಕ್ಷಮಿಸಿರಿ" ಎಂದಳು.

ಮಹಾರಾಜರು ಚಿಂತೆಯಲ್ಲಿ ಮುಳುಗಿದರು. ತುಸು ಹೊತ್ತಿನ ಬಳಿಕ "ಮುದುಕಿಗೆ ೧೦೦೦ ರೂಪಾಯಿ ಕೊಟ್ಟು ಆದರದಿಂದ ಕಳುಹಿಸಿಬಿಡಿರಿ" ಎಂದು ಹೇಳಿದರು. ಜನರು ಆಶ್ಚರ್ಯದಿಂದ—"ಮಹಾರಾಜ್! ಶಿಕ್ಷೆಗೆ ಯೋಗ್ಯಳಾದ ಈ ಮುದುಕಿಗೆ ಬಹುಮಾನವೆ?" ಎಂದು ಕೇಳಿದರು.

"ನಿರ್ಜೀವ ವೃಕ್ಷವೂ ಕಲ್ಲು ತಗಲಿದಾಗ ಸವಿಯಾದ ಹಣ್ಣುಗಳನ್ನೀಯುವಾಗ ಪಂಜಾಬಿನ ಮಹಾರಾಜನು ಬರಿಗೈಯಿಂದ ಹೇಗೆ ಕಳುಹಿಸಿಯಾನು?" ಎಂದರು, ಮಹಾರಾಜರು.

(ಹಿಂದಿಯಿಂದ)

▪▪▪▪▪▪▪▪▪▪

೧೨. ಅಹಂಕಾರ

ಯಾತ್ರಿಕರಿಂದ ತುಂಬಿದ ಆ ಹಡಗು ಒಂದು ದ್ವೀಪದ ಬಳಿ ಸಾಗುತಿತ್ತು. ಹಡಗಿನ ಮೇಲೆ ಕುಳಿತ ಪಾದರಿಗಳೊಡನೆ ಹಡಗಿನ ಕಪ್ತಾನನು ಹೀಗೆನ್ನುತ್ತಿದ್ದನು—"ಹಗಲಿರುಳೂ ದೇವಾರಾಧನೆಯಲ್ಲಿ ಮಗ್ನರಾಗಿರುವ ಮೂವರು ಸಾಧುಗಳು ಈ ದ್ವೀಪದಲ್ಲಿದ್ದಾರೆ." ಪಾದರಿಗಳು ಕೂಡಲೇ ಹಡಗನ್ನು ದ್ವೀಪದಲ್ಲಿ ನಿಲ್ಲಿಸುವಂತೆ ಅಜ್ಞಾಪಿಸಿದರು. ಅವರು ಆ ಸಾಧುಗಳ ಬಳಿಗೆ ತಲುಪಿ"ನಿಮ್ಮ ಪ್ರಾರ್ಥನೆಗಳನ್ನು ಕೇಳಬಯಸುತ್ತೇನೆ" ಎಂದರು. ಮೂವರೂ ಸಾಧುಗಳು ನತಮಸ್ತಕರಾಗಿ "ಪ್ರಭುವೇ, ನಮಗೆ ಪ್ರಾರ್ಥನೆ ತಿಳಿದಿಲ್ಲ. ನಾವೇನೂ ಜ್ಞಾನಿಗಳಲ್ಲ. 'ಇಲ್ಲಿಯೂ ನೀನೆ, ಅಲ್ಲಿಯೂ ನೀನೆ'—ಈ ವಾಕ್ಯವೊಂದು ಮಾತ್ರ ನಮಗೆ ಗೊತ್ತಿದೆ. ಈ ವಾಕ್ಯದಿಂದಲೇ ನಾವು ದೇವರನ್ನು ಸ್ಮರಿಸುತ್ತೇವೆ." ಪಾದರಿಗಳು ಹುಬ್ಬು ಗಂಟಿಕ್ಕಿದರು. ತುಟಿಕಚ್ಚುತ್ತ ಅವರು "ಮೂರ್ಖರೇ! ದೇವರನ್ನು ಹೀಗೆ ಅಪಮಾನಿಸುವುದೇ? ಇದು ಪ್ರಾರ್ಥನೆಯೇ ಅಲ್ಲ—ಅಜ್ಞಾನಿಗಳ ಪ್ರಲಾಪ. ಸರಿಯಾಗಿ ನಿಂತುಕೊಳ್ಳಿ, ಕ್ರಿಸ್ತನು ತಿಳಿಸಿದಂತಹ ಪ್ರಾರ್ಥನೆಯನ್ನು ನಾನು ನಿಮಗೆ ಹೇಳಿಕೊಡುತ್ತೇನೆ"—ಎನ್ನುತ್ತಾ ಅವರು ಬೈಬಲಿನಲ್ಲಿ ವರ್ಣಿಸಲ್ಪಟ್ಟ ಪ್ರಾರ್ಥನೆಯ ಒಂದೊಂದು ಶಬ್ದವನ್ನೂ ಆ ಸಾಧುಗಳಿಗೆ ಹೇಳಿಕೊಟ್ಟರು. ದಿನವಿಡೀ ಪರಿಶ್ರಮಿಸಿದ ಬಳಿಕ ಆ ಅಜ್ಞಾನಿ ಸಾಧುಗಳು ಈ ಪ್ರಾರ್ಥನೆಯನ್ನು ಕಷ್ಟಪಟ್ಟು ಕಂಠಪಾಠ ಮಾಡಿಕೊಂಡರು. ಪಾದರಿಗಳು ತಾವಿಂದು ಕೃತಾರ್ಥರಾದೆವೆಂಬ ದರ್ಪದಿಂದ ಹಡಗಿಗೆ ತೆರಳಿದರು. ಹಡಗು ಗಹನ ಗಂಭೀರ ಸಾಗರದಲ್ಲಿ ಮುಂದರಿಯಿತು.

ತುಸುಹೊತ್ತಿನ ಬಳಿಕ ಮೂವರು ಮುದುಕರು ಸಾಗರದ ಉತ್ತಾಲ ತರಂಗಗಳ ಮೇಲೆ ವೇಗವಾಗಿ ನಡೆದು ಬರುತ್ತಿರುವುದನ್ನು ಆ ಪಾದರಿಗಳು ಕಂಡರು. ಅವರು ದೇವದೂತರಂತೆ ಕಂಗೊಳಿಸುತ್ತಿದ್ದರು. ಅವರು ಹಡಗನ್ನು ಸಮೀಪಿಸಿದಾಗ ಪಾದರಿಗಳು ಬೆಚ್ಚಿಬಿದ್ದರು. ಆ ಮೂವರು ಅಶಿಕ್ಷಿತ ಸಾಧುಗಳೇ ಎದುರಿಗಿದ್ದರು. ಪಾದರಿಗಳನ್ನು ನಮಸ್ಕರಿಸುತ್ತ ಅವರು "ಸ್ವಾಮಿ, ನೀವು ಕಲಿಸಿದ ಪ್ರಾರ್ಥನೆಯು ನಮಗೆ ಮರೆತೇ ಹೋಯಿತು. ದಯವಿಟ್ಟು ಇನ್ನೊಮ್ಮೆ ಕಲಿಸಿರಿ" ಎಂದರು.

ಪಾದರಿಗಳ ಅಹಂಕಾರ ಇಳಿದುಹೋಯಿತು. ಅವರು ಆ ಮೂವ ರೆದುರಿಗೆ ಮೊಣಕಾಲೂರಿ, "ದಿವ್ಯ ಬಂಧುಗಳೇ! ನನ್ನನ್ನು ಕ್ಷಮಿಸಿ, ನಿಮ್ಮ ಪ್ರಾರ್ಥನೆಯು ನೇರಾಗಿ ದೇವರ ಬಳಿಗೇ ತಲಪುತ್ತದೆ. ಏಕೆಂದರೆ, ಅದು ಆತ್ಮನ ವಾಣಿಯಾಗಿದೆ. ಆ ಪರಮಾತ್ಮನು ನನಗೂ ತನ್ನ ದಯಾಕಣವನ್ನು ಕರುಣಿಸುವಂತೆ ನೀವು ದಯವಿಟ್ಟು ನನಗಾಗಿಯೂ ಪ್ರಾರ್ಥಿಸಲಾರಿರಾ?'' ಎಂದು ಬೇಡಿಕೊಂಡರು. (ಟಾಲ್‌ಸ್ಟಾಯ್‌ರವರ ಕತೆಯ ಆಧಾರ)

\- - - - - - - - -

೧೩. ಚಂದ್ರಕಾಂತಮಣಿ

ನಂದನ ನಿಕುಂಜದ ಅಕ್ಷಯ ಸುರಭಿಮಯ ಸುಮನಗಳಿಂದ ಸುಸಜ್ಜಿತವಾದ ದೇವವಿಮಾನದಲ್ಲಿ ಆ ರಾಜರ್ಷಿಯನ್ನು ಕುಳ್ಳಿರಿಸಿ, ದೇವದೂತರು ಸ್ವರ್ಗಕ್ಕೆ ಕರೆತಂದಾಗ ಅವನನ್ನು ಸ್ವಾಗತಿಸಲು ಸ್ವತಃ ಧರ್ಮರಾಜನೇ ನಿಂತುಕೊಂಡಿದ್ದನು. ದೇವತೆಗಳು ಹೂಮಳೆಗರೆದರು. ಮತ್ತು ಗಂಧರ್ವಕಿನ್ನರರು ಆನಂದಗೀತಗಳನ್ನು ಬಾರಿಸಿದರು. ತುಸು ಹೊತ್ತಿನಲ್ಲೇ ಕುಬೇರನು ಬಂದು ರಾಜರ್ಷಿಗೆ ಸ್ವರ್ಗದ ಪ್ರಮುಖ ವೈಭವ ಸ್ಥಾನಗಳನ್ನು ತೋರಿಸತೊಡಗಿದನು.

ತಿರುಗುತ್ತಾ ತಿರುಗುತ್ತಾ ಕಟ್ಟಕಡೆಗೆ ಅವರಿಬ್ಬರೂ ವೈಕುಂಠಕ್ಕೆ ತೆರಳಿದರು. ಎದುರಿಗೇ ಮಹಾವಿಷ್ಣುವಿನ ಸಿಂಹಾಸನವಿತ್ತು. ಅವರ ಅಕ್ಕಪಕ್ಕದ ಅರ್ಧಚಂದ್ರಾಕಾರದ ಪಂಕ್ತಿಯಲ್ಲಿ ಚಂದ್ರಕಾಂತಮಣಿ ಜಟಿತ ಮುಕುಟಧಾರಿಗಳಾದ ತೇಜಸ್ವೀ ಮಹಾತ್ಮರು ವಿರಾಜಿಸುತ್ತಿದ್ದರು. ಕುಬೇರನು ರಾಜರ್ಷಿಯನ್ನು ಒಂದು ಆಸನದ ಮೇಲೆ ಕುಳ್ಳಿರಿಸಿ, ವಿಷ್ಣುವಿನ ಸಂಕೇತದಂತೆ ಸ್ವರ್ಣಮುಕುಟವೊಂದನ್ನು ತೊಡಿಸಿದನು. ಅದನ್ನು ಕಂಡೊಡನೆಯೇ ರಾಜರ್ಷಿಯ ಹರ್ಷಭರಿತ ಮುಖವು ತೀವ್ರ ನಿರಾಶೆಯಿಂದ ಬಾಡಿ ಹೋಯಿತು. ನನ್ನ ತಲೆಯ ಮೇಲೆ ಚಂದ್ರಕಾಂತ ಮಣಿಯ ಮುಕುಟವೇಕಿಲ್ಲ? ಇವರೆಲ್ಲರಂತೆ ನನ್ನ ಸ್ಥಾನವೂ ವಿಷ್ಣುವಿನ ಸಮೀಪವೇಕಿಲ್ಲ? ಎಂದು ಅವನು ಮನದೊಳಗೇ ಕಳವಳಗೊಂಡನು.

ಅಂತರ್ಯಾಮಿಯಾದ ವಿಷ್ಣುವು ರಾಜರ್ಷಿಯ ಮನೋಭಾವವನ್ನು ಗುರುತಿಸಿದನು ಅವನು ಮುಗುಳ್ನಗುತ್ತಾ ಹೀಗೆಂದನು—'ರಾಜನ್!

ಇದಕ್ಕಾಗಿ ನೀನು ಆಶ್ಚರ್ಯಪಡಬೇಕಿಲ್ಲ. ಕೇಳು. ನೀನು ದೀನರಿಗೆ ದ್ರವ್ಯದಾನವಿತ್ತು ಸಹಾಯಮಾಡಿದೆ; ನಿಜ. ಆದರೆ, ಅವರ ದುಃಖದಲ್ಲಿ ಸಹಭಾಗಿಯಾಗಲಿಲ್ಲ. ನಿನ್ನ ಕಂಗಳಲ್ಲಿ ಆತ್ಮೀಯತೆ ಕಾಣಿಸಿಕೊಳ್ಳಲಿಲ್ಲ. ದೀನದರಿದ್ರರನ್ನು ನಿನ್ನಂತೆಯೇ ಎಂದು ಬಗೆಯಲು ನಿನ್ನ ಅಹಂಕಾರ ಬಿಡಲಿಲ್ಲ. ನೀನು ಮಾಡಿದ ಉಪಕಾರವೆಲ್ಲವೂ ಸ್ವರ್ಗ ಸುಖಕ್ಕಾಗಿಯೇ ಅಲ್ಲದೆ ದುಃಖಗಳ ಮೇಲೆ ನಿನಗಿದ್ದ ಹಾರ್ದಿಕ ಸಹಾನುಭೂತಿಯಿಂದಲ್ಲ. ಮಣಿಯಂತೆಯೇ ಕರಗಿ ಜನಮನೋರಂಜನದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡವರು ಮಾತ್ರ ಈ ಮಣಿಮುಕುಟಕ್ಕೆ ಅಧಿಕಾರಿಗಳೆನಿಸುವರು."

(ಎಸ್. ರಾಧಾಕೃಷ್ಣನ್.)

\.........

೧೪. ಮೋಹಭಂಗ

ತಮ್ಮ ಅಸದೃಶಜ್ಞಾನದಿಂದ ಸಮಸ್ತ ದಕ್ಷಿಣಾಪಥವನ್ನು ಸೋಲಿಸುತ್ತ ಶಂಕರಾಚಾರ್ಯರು ಕಾಶಿಗೆ ತಲುಪಿದರು. ಆಗ ಕಾಶೀಪಟ್ಟಣವು ಉತ್ತರಾಪಥದ ಜ್ಞಾನಕೇಂದ್ರವೆನಿಸಿತ್ತು. ಪ್ರಾತಃಕಾಲ ಅವರು ಸ್ನಾನಮುಗಿಸಿ ಹಿಂದಿರುಗುತ್ತಿದ್ದಾಗ ಚಾಂಡಾಲದಂಪತಿಗಳು ಎದುರಾದರು. ಶಂಕರಾಚಾರ್ಯರು ಕರ್ಮಕಾಂಡೀ ಬ್ರಾಹ್ಮಣರ ವಂಶದಲ್ಲಿ ಹುಟ್ಟಿದ್ದುದರಿಂದ ತಮ್ಮ ಪೈತೃಕ ಸಂಸ್ಕಾರಗಳನ್ನು ಕಳಚಿಕೊಂಡಿರಲಿಲ್ಲ. ತುಸು ಗಟ್ಟಿಯಾಗಿ ಅವರು—"ಚಾಂಡಾಲರೇ ದೂರ ಸರಿಯಿರಿ" ಎಂದು ಹೇಳಿದರು. ಆದರೆ, ಚಾಂಡಾಲರು ದೂರ ಸರಿಯುವುದರ ಬದಲು ಅವರೆದುರಿಗೇ ಬಂದು ನಿಂತುಕೊಂಡರು. ಆಚಾರ್ಯರು ತಾಳ್ಮೆಗೆಟ್ಟರು. ಅವರು ತಿರಸ್ಕಾರದಿಂದ ಮಾತಾಡಿದರೂ ಹೊಲೆಯರು ಸರಿಯಲಿಲ್ಲ. ಬದಲಾಗಿ ಅವರಿಬ್ಬರೂ ಜೋರಾಗಿ ನಗತೊಡಗಿದರು. ಕಟ್ಟಕಡೆಗೆ ಹೊಲೆಯನು ಒಬ್ಬ ಹೀಗೆಂದನು—"ಭಗವನ್, ನೀವು 'ದೂರ ಸರಿಯಿರಿ' ಎಂದು ಹೇಳಿದಿರಲ್ಲ! ಯಾರು ಸರಿಯಬೇಕು? ದೇಹವೆ? ದೇಹಿಯೆ? ಈ ದೇಹವು ಅನ್ನದಿಂದ ಪೋಷಿತವಾಗಿರುವುದರಿಂದ ಅನ್ನಮಯವೆಂದು ಹೇಳಿಸಿಕೊಳ್ಳುತ್ತದೆ. ಆದ್ದರಿಂದ ಒಂದು ಅನ್ನಮಯ ದೇಹವು ಮತ್ತೊಂದರಿಂದ ಭಿನ್ನವೆನಿಸಲಾರದು. ಈ ದೇಹದಲ್ಲಿರುವ 'ಜೀವ'ನು ಸಾಕ್ಷಿಯೆಂದು ಹೇಳಿಸಿಕೊಳ್ಳುತ್ತಾನೆ. ಆದ್ದರಿಂದ ಒಬ್ಬ

‘ಸಾಕ್ಷಿ’ಯು ಮತ್ತೊಬ್ಬ ಸಾಕ್ಷಿಗಿಂತ ಭಿನ್ನನಾಗಿರಲಾರನು. ಬ್ರಾಹ್ಮಣ ಶ್ರೇಷ್ಠರೆ! ನಿಮ್ಮ ಮಣ್ಣಿನ ದೇಹವನ್ನು ನನ್ನ ಮಣ್ಣಿನ ದೇಹದಿಂದ ದೂರವಿಡಲು ಪ್ರಯತ್ನಿಸುತ್ತೀರಾ? ಅಥವಾ ನಿಮ್ಮ ಆತ್ಮವನ್ನು ನನ್ನ ಆತ್ಮಕ್ಕಿಂತ ಭಿನ್ನವಾಗಿಡಲು ಬಯಸುತ್ತೀರಾ? ಜ್ಞಾನಸಾಗರವನ್ನು ಮಥಿಸಿ ಅಮೃತಪಾನ ಮಾಡಿದ ಆಚಾರ್ಯರೆ, ನಿಮ್ಮ ಅದ್ವೈತ ಜ್ಞಾನವೆಂದರೆ ಇದೇ ತಾನೆ?”

ತಪೋದೀಪ್ತ ಶಂಕರಾಚಾರ್ಯರ ಅಭಿಮಾನೋನ್ನತ ಮಸ್ತಕವು ಈ ಚಾಂಡಾಲನೆದುರಿಗೆ ತಗ್ಗಿಹೋಯಿತು. ಅವನನ್ನಾಲಿಂಗಿಸಲೆಂದು ಅವರು ತಮ್ಮ ಬಾಹುಗಳನ್ನು ಪಸರಿಸಿದರು. ಆದರೆ,ಆಗಲೇ ಆ ಚಾಂಡಾಲ ದಂಪತಿಗಳು ಇದ್ದಕ್ಕಿದ್ದಂತೆ ಪಾರ್ವತೀಪರಮೇಶ್ವರರಾದುದನ್ನು ಅವರ ಮೋಹಮುಕ್ತನಯನಗಳು ನಿಚ್ಚಳವಾಗಿ ನಿಟ್ಟಿಸಿದುವು!

(ರಮಣ ಮಹರ್ಷಿ.)

೧೫. ಅರ್ಧಾಣೆಯ ಸಿದ್ಧಿ

ಶ್ರೀ ರಾಮಕೃಷ್ಣ ಪರಮಹಂಸರು ಒಮ್ಮೆ ಈ ಕತೆ ಹೇಳಿದರು:—

‘ಯೋಗಿಯೊಬ್ಬನು ತನ್ನ ಗುರುಗಳ ಬಳಿಹೋಗಿ........‘ನಾನು ೧೪ ವರ್ಷಗಳ ಕಾಲ ಕಾಡಿನಲ್ಲಿದ್ದು ಕಠಿನ ಯೋಗಾಭ್ಯಾಸಮಾಡಿದೆ. ಪರಿಣಾಮವಾಗಿ ನಾನೀಗ ನೀರಿನ ಮೇಲೆ ನಡೆಯುವ ದೈವೀಶಕ್ತಿಯನ್ನು ಪಡೆದಿದ್ದೇನೆ ....’ ಎಂದ.

‘ನೀನು ವ್ಯರ್ಥವಾಗಿ ೧೪ ವರ್ಷಗಳ ಕಾಲ ಕಷ್ಟಪಟ್ಟೆ. ಅರ್ಧಾಣೆ ತೆತ್ತರೆ ಅಂಬಿಗನು ನಿನ್ನನ್ನು ಆಚೆ ದಡಕ್ಕೆ ಒಯ್ಯಬಲ್ಲ. ನೀನು ಪಡೆದ ಈ ಸಿದ್ಧಿ ಕೇವಲಅರ್ಧಾಣೆಯದು!’—ಗುರುಗಳೆಂದರು.

(ರಾಮಕೃಷ್ಣೋಪನಿಷತ್.)

Edited, Printed & Published by K. V. Shenoy
at The Prabhat Printers, Ltd., Mangalore.